# ಯಮನೆಲ್ಲೊ ಕಾಣೆನೆಂದು ಹೇಳಬೇಡ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 446.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 151.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 473.
4. **Note:** The wordings given without highlights are as per Ref. 1. The wordings mentioned in green highlights are as per Ref. 2. The wordings in Ref. 3 are matching with Ref. 2.
5. **Note:** Singer has followed lyrics as in Ref. 1.

ರಾಗ: ಶಂಕರಾಭರಣ ತಾಳ: ಆದಿ

ಯಮನೆಲ್ಲೊ ಕಾಣೆನೆಂದು ಹೇಳಬೇಡ
ಯಮನೆ ಶ್ರೀ ರಾಮನು ಸಂದೇಹ ಬೇಡ ॥ ಪ ॥

ನಂಬಿದ ವಿಭೀಷಣಗೆ ರಾಮನಾದ
ನಂಬದಿದ್ದ ರಾವಣಗೆ ಯಮನಾದ ॥ 1 ॥ (ಯಮನೇ ಆದ)

ನಂಬಿದ ಅರ್ಜುನನಿಗೆ ಭೃತ್ಯನಾದ (ಬಂಟನಾದ)
ನಂಬದಿದ್ದ ದುರ್ಯೋಧನನಿಗೆ ಮೃತ್ಯುವಾದ ॥ 2 ॥ (ಕೌರವನಿಗೆ ಕಂಟಕನಾದ)

ನಂಬಿದ ಪ್ರಹ್ಲಾದನಿಗೆ ಹರಿಯಾದ
ನಂಬದಿದ್ದ ಹಿರಣ್ಯಕನಿಗೆ ಅರಿಯಾದ ॥ 3 ॥

ನಂಬಿದ ಉಗ್ರಸೇನಗೆ ಮಿತ್ರನಾದ
ನಂಬದಿದ್ದ ಕಂಸನಿಗೆ ಶತ್ರುವಾದ ॥ 4 ॥

ನಂಬಿಕೊಳ್ಳಿ ಬೇಗ ಶ್ರೀ ಕೃಷ್ಣ ದೇವನ (ನಂಬಿದವರ ಸಲಹುವ ನಮ್ಮ ದೊರೆಯು)

ಕಂಬು ಚಕ್ರಧಾರಿ ಪುರಂದರ ವಿಠಲನ || 5 || (ಅಂಬುಜಾಕ್ಷ ಪುರಂದರ ವಿಠ್ಠಲ ಹರಿಯು)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಯಮಧರ್ಮನಿಗೆ ಅಂತರ್ಯಾಮಿಯಾಗಿ ನಿಂತು ಯಮವಾಚ್ಯನಾಗಿ ಪಾಪಿಗಳಿಗೆ ಶಿಕ್ಷೆ ಕೊಡುವ ಪರಮಾತ್ಮನನ್ನು ಕುರಿತು ಈ ಹಾಡಿನಲ್ಲಿ ದಾಸರು ವಿವರಣೆ ಮಾಡಿದ್ದಾರೆ.

**ಹಿರಣ್ಯಕ** – ಹಿರಣ್ಯಕಶಿಪು.

**ಉಗ್ರಸೇನ** – ಮಧುರೆಯ ರಾಜನಾಗಿದ್ದವನು; ಕಂಸನ ತಂದೆ. ದುರಾಚಾರಿಯಾದ ಕಂಸನು ರಾಜನಾಗಬೇಕೆಂಬ ಆಸೆಯಿಂದ ತಂದೆಯನ್ನೇ ಸೆರೆಯಲ್ಲಿರಿಸಿ, ತಾನು ಆಡಳಿತ ನಡೆಸತೊಡಗಿದೆ. ಉಗ್ರಸೇನನ ಸೋದರ ದೇವಕನೆಂಬುವನ ಮಗಳೇ ದೇವಕಿ, ಕೃಷ್ಣನ ತಾಯಿ. ಆಹುಕನೆಂಬ ಚಂದ್ರವಂಶದ ಅರಸನ ಮಕ್ಕಳು ದೇವಕ, ಉಗ್ರಸೇನರು

**ಕಂಬು** – ಶಂಖ.

**Classification:** Keerthane
**Ankita:** purandara vittala
**Location:** NA
**Category:** Bhakti, mahatmya gynana
**Sub-Category:** yama, rama, Vibhishana, ravana, pandava, kaurava, shatru, prahallada, krishna, asura, kamsa, chakra
**Pravachana:** NA
**Explanation:** NA